ಅಕಾಲಿಕ ಮಳೆ: ತಂಪಾದ ಕಮಲನಗರ

ಉದಯಕಾಲ ನ್ಯೂಸ್

ಕಮಲನಗರ: ಪಟ್ಟಣದ ಸೇರಿದಂತೆ ಸುತ್ತಲಿನ ಗ್ರಾಮಗಳಲ್ಲಿ ಸೋಮವಾರ ಬಿರುಗಾಳಿ ಜತೆಗೆ ಅಕಾಲಿಕ ಮಳೆ ಸುರುಯಿತ್ತು. ಅಕಾಲಿಕ ಮಳೆಯಿಂದ ಕೆಲ ಕಾಲ ಜನ ಜೀವನ ಅಸ್ತವ್ಯಸ್ಥವಾಯಿತು.

ಸಂಜೆ ಸುಮಾರು 6:30ಕ್ಕೆ ದಿಢೀರನೇ ಶುರುವಾದ ಬಿರುಗಾಳಿಯೊಂದಿಗೆ ಹುಯ್ಯನೆ ಮಳೆ ಸುರಿಯುಲಾರಂಭಿಸುತ್ತು. ಬಿಸಿಲಿನ ಬೇಗೆಯಿಂದ ತತ್ತರಿಸಿದ ತಾಲೂಕಿನ ವಿವಿಧ ಹೋಬಳಿ ಕೇಂದ್ರದ ಸುತ್ತಲಿನ ಗ್ರಾಮದ ಜನತೆಗೆ ಅಕಾಲಿಕ ಮಳೆ ತಂಪು ತಂದಿವೆ. ಪಟ್ಟಣದ ಅಲ್ಲಮ ಪ್ರಭು ವೃತ ಬಳಿ ಮುಖ್ಯ ರಸ್ತೆಯಲ್ಲಿ ವ್ಯಾಪಾರಸ್ತರು, ಜನಸಾಮಾನ್ಯರು, ಯುವಕರು ಮಳೆಯಲ್ಲಿಯೇ ಸಂಚರಿಸುತ್ತಿರುವ ದೃಶ್ಯ ಕಂಡು ಬಂತ್ತು.

ಭಾರಿ ಮಳೆಯಿಂದ ರಸ್ತೆ ಮೇಲೆ ನೀರು ತುಂಬಿತ್ತಿರುವ ದೃಶ್ಯ ಕಂಡು ಬಂತು. ಬೈಕ್, ಆಟೋ ಮತ್ತು ಸೈಕಲ ಸವಾರರು ಸಂಚಾರಕ್ಕಾಗಿ ಹೈರಾಣರಾದರು. 7:30ವರಿಗೂ ಎಲ್ಲೂ ಅಹಿತಕರ ಘಟನೆ ನಡೆದ ಬಗ್ಗೆ ವರದಿಯಾಗಿಲ್ಲ. ತಾಲೂಕಿನ ಕೋಟಗ್ಯಾಳ, ಡೋಣಗಾಂವ, ಖೇಡ ಹುಲಸೂರ, ಡಿಗ್ಗಿ ಸೇರಿದಂತ್ತೆ ಸುತ್ತಲಿನ ಗ್ರಾಮಗಳಲ್ಲಿ ಅಕಾಲಿಕ ಮಳೆ ಸುರಿದಿದೆ. ಹೀಗಾಗಿ ಮಳೆದ ಧಗೆಯಿಂದ ಜನ ಪರಿತಪಿಸುವಂತಾಯಿತ್ತು.

ಬಸವಗಿರಿಯಲ್ಲಿ ಬಸವೋತ್ಸವ ಸಮಾರೋಪ

ಬೀದರ್: ಇಂದಿನ ಸರ್ಕಾರಗಳು ಬಸವಾದಿ ಶರಣರತ್ತ್ವ ಅನುಸರಿಸುವುದು ಅವಶ್ಯಕವಾಗಿದೆ ಎಂದು ಕಲಬುರಗಿಯ ಕೇಂದ್ರೀಯ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ. ಕಿರಣ ಗಾಜನೂರು ಹೇಳಿದರು.

ಲಿಂಗಾಯತ ಮಹಾ ಮಠದ ವತಿಯಿಂದ ಅಕ್ಕ ಅನ್ನಪೂರ್ಣ ತಾಯಿ ಅವರ ಸ್ಮರಣೋತ್ಸವ ನಿಮಿತ್ತ ಇಲ್ಲಿಯ ಬಸವಗಿರಿಯಲ್ಲಿ ಭಾನುವಾರ ನಡೆದಬಸವೋತ್ಸವದ ಸಮಾರೋಪ ಸಮಾರಂಭದಲ್ಲಿ ಅವರು ಮುಖ್ಯ ಅನುಭಾವ ಮಂಡಿಸಿದರು.

ಬಸವಣ್ಣನವರು ಜಾತಿ, ವರ್ಣ, ವರ್ಗ, ಲಿಂಗ ಭೇದಗಳಿಂದ ಒಡೆದು ಹೋಗಿದ್ದ ಸಮಾಜಕ್ಕೆ ಒಟ್ಟಾಗಿ ಬಾಳುವ ನೈತಿಕ ಸೂತ್ರ ನೀಡಿದರು. ಶ್ರೇಣಿ ಕೃತ ಸಮಾಜಅಲ್ಲಗಳೆದು ಸಮ ಸಮಾಜಕಟ್ಟಿದರು ಎಂದು ತಿಳಿಸಿದರು. ಐದು ಸಾವಿರ ವರ್ಷಗಳಿಂದ ಭಾರತೀಯರು ಸಾಂಸ್ಕೃತಿಕ ವಸಾಹತುಶಾಹಿಗೆ ಒಳಗಾಗಿದ್ದರೆ. ಇಂಥ ಶೋಷಣೆಯ ವಿರುದ್ಧದ ಪ್ರಥಮ ಸ್ವಾತಂತ್ರ್ಯ ಚಳವಳಿಯೇ ಶರಣ ಚಳವಳಿ. ಮನುಷ್ಯರು ಮನುಷ್ಯರಾಗಿ ಬದುಕಲು ಅವಕಾಶ ಕಲ್ಪಿಸಿದ ಶರಣರು ಬದುಕಿಗೆ ನವ ದೃಷ್ಟಿಕೋನ ನೀಡಿದರು ಎಂದು ಹೇಳಿದರು. ಆಳಂದದ ಕೋರಣೇಶ್ವರ ಸ್ವಾಮೀಜಿ, ಬಸವಕಲ್ಯಾಣದ ಗುಣತೀರ್ಥವಾಡಿಯ ಕಲ್ಯಾಣ ಮಹಾ ಮನೆಯ ಬಸವಪ್ರಭು ಸ್ವಾಮೀಜಿ, ಭಾಲ್ಕಿ ಹಿರೇಮಠ ಸಂಸ್ಥಾನದ ಗುರುಬಸವ ಪಟ್ಟದ್ದೇವರು, ಲಿಂಗಾಯತ ಮಹಾ ಮಠದ ಪ್ರಭುದೇವ ಸ್ವಾಮೀಜಿ, ಭಾರತೀಯ ಬಸವ ಬಳಗದ ರಾಜ್ಯ ಅಧ್ಯಕ್ಷ ಬಾಬುವಾಲಿ, ಗುಲಬರ್ಗಾ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಸಿದ್ದಪ್ಪ ಮೂಲಗೆ ಮಾತನಾಡಿದರು. ಶ್ರೀ ಬೀರಲಿಂಗೇಶ್ವರ ಸೌಹಾರ್ದ ಸಹಕಾರಿ ಸಲಹಾ ಸಮಿತಿ ಸದಸ್ಯೆ ಜಗದೇವಿ ಪನಸಾಲೆ ಅಧ್ಯಕ್ಷತೆ ವಹಿಸಿದ್ದರು. ಅತ್ತಾಪುರದ ನಾಗರಾಜ ಸೋರಳ್ಳಿ, ಬಸವ ಜಯಂತಿ ಉತ್ಸವ ಸಮಿತಿಯ ಮಹಿಳಾ ಘಟಕದ ಅಧ್ಯಕ್ಷೆ ಡಾ.ದೇವಕಿ ನಾಗೂರೆ, ಕಲಬುರಗಿಯ ಜಗನ್ನಾಥ ಇದಲಾಯಿ, ಪತ್ರಕರ್ತ ಜಗನ್ನಾಥ ಶೇರಿಕಾರ್, ಹುಮನಾಬಾದ್‌ನ ಮಲ್ಲಿಕಾರ್ಜುನ ಸಂಗಮಕರ್, ಹಲಸಿಯ ಸಂತೋಷ ಪಾಟೀಲ, ಮಲ್ಲಮ್ಮ ಹೆಬ್ಬಾಳೆ, ಅನಿತಾಆರ್. ಪಾಟೀಲ, ವಿಜಯಲಕ್ಷ್ಮಿ ರಾಜೋಳೆ, ಸಾಹಿತಿರಮೇಶ ಮಠಪತಿ ಇದ್ದರು. ಅಶ್ವಿನಿ ರಾಜಕುಮಾರ ಚಿಟ್ಟಾ ವಚನ ಸಂಗೀತ ನಡೆಸಿಕೊಟ್ಟರು. ನೃತ್ಯಾಂಗನಾ ನಾಟ್ಯ ಕಲಾ ಕೇಂದ್ರದ ಕಲಾವಿದರು ಆಕರ್ಷಕ ವಚನ ನೃತ್ಯ ಪ್ರದರ್ಶಿಸಿದರು. ಕಲ್ಪನಾ ಬೀದೆ ಸ್ವರಚಿತ ಕವನ ವಾಚಿಸಿದರು. ಶಿಲ್ಪಾ ಮಜಗೆ ನಿರೂಪಿಸಿದರು. ವಚನಶ್ರುತಿ ಅಭಿಲಾಶ್ ಸ್ವಾಗತಿಸಿದರು.

ಕೃತಕ ಬುದ್ಧಿಮತ್ತೆ ಹಾಗೂ ಡಿಜಿಟಲ್ ಸುರಕ್ಷತೆ ಕುರಿತು ಜಾಗೃತಿ | ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆ

ಶಾಹೀನ್ ನಾಲೆಡ್ಜ್ ಸಿಟಿಯಲ್ಲಿ ಯಶಸ್ವಿ 'ಎಐ ಶೀ ಸಮಿಟ್'

ಉದಯಕಾಲ ನ್ಯೂಸ್

ಬೀದರ್: ಇಲ್ಲಿನ ಶಾಹೀನ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ವತಿಯಿಂದ ಶಾಹೀನ್ ನಾಲೆಡ್ಜ್ ಸಿಟಿಯಲ್ಲಿ 18 ರಿಂದ 25 ವರ್ಷದ ಮಹಿಳೆಯರಿಗಾಗಿ ವಿಶೇಷವಾಗಿ ಹಮ್ಮಿಕೊಳ್ಳಲಾಗಿದ್ದ ಎಐ ಶೀ ಸಮಿಟ್ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಜರುಗಿತು.

ಈ ಸಮಾರಂಭವು ಪ್ರಮುಖವಾಗಿ ಕೃತಕ ಬುದ್ಧಿಮತ್ತೆ (ಎಐ), ಸೈಬರ್ ಅಪರಾಧ ಜಾಗೃತಿ, ಡಿಜಿಟಲ್ ಸುರಕ್ಷತೆ ಹಾಗೂ ಮಹಿಳಾ ರಕ್ಷಣೆಗಾಗಿ ಇರುವ ಮೊಬೈಲ್ ಅಪ್ಲಿಕೇಶನ್‌ಗಳ ಕುರಿತು ಕೇಂದ್ರೀಕೃತವಾಗಿತ್ತು. ಇದರ ಅಂಗವಾಗಿ ವಿದ್ಯಾರ್ಥಿನಿಯರಿಗಾಗಿ ಕೃತಕ ಬುದ್ಧಿಮತ್ತೆ ರಸಪ್ರಶ್ನೆ, ಪ್ರಬಂಧ ಮಂಡನೆ ಹಾಗೂ ಕೃತಕ ಬುದ್ಧಿಮತ್ತೆ ವಿಡಿಯೋ ತಯಾರಿಕೆಯಂತಹ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಬೆಳಗಿನ ಅಧಿವೇಶನದಲ್ಲಿ ಮಲ್ಲಾರೆಡ್ಡಿ ವಿಶ್ವವಿದ್ಯಾಲಯದ ಉಪಾಧ್ಯಕ್ಷೆ ಪ್ರೀತಿ ರೆಡ್ಡಿ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯ ಪ್ರೊ.ಮುಸ್ತಫಾ ಬಸ್ತಿ ಕೋಡಿ, ಅಕ್ಕಪಡೆ ಸಂಸ್ಥೆಯ ಮುಖ್ಯ ಸಲಹೆಗಾರ್ತಿ ಶೈನಿ ಪ್ರದೀಪ್, ಗುಂಟ್ ಹಾಗೂ ಸ್ಟ್ಯಾಂಡರ್ಡ್ ಟಚ್ ಸಂಸ್ಥೆಯ ಸಂಸ್ಥಾಪಕ ಮತ್ತು ಮುಖ್ಯ ತಾಂತ್ರಿಕ ಅಧಿಕಾರಿ ಹಂಝಾ ಮೊಹಮ್ಮದ್ ಅಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಂಜೆಯ ಅಧಿವೇಶನದಲ್ಲಿ 'ಹೊಸ ಶಿಕ್ಷಣ ನೀತಿ 2020' ಕುರಿತು ವಿದ್ಯಾರ್ಥಿ ಸಂಸತ್ತು (ಸ್ಟೂಡೆಂಟ್ ಪಾರ್ಲಿಮೆಂಟ್) ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಶಾಹೀನ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್‌ನ ಸಂಸ್ಥಾಪಕ ನಿರ್ದೇಶಕ ಅಬ್ದುಲ್ ಹಸೀಬ್, ಕಾರ್ಯನಿರ್ವಾಹಕ ನಿರ್ದೇಶಕ ಅಬ್ದುಲ್ ಮುಖೀತ್, ಶೈಕ್ಷಣಿಕ ನಿರ್ದೇಶಕಿ ಶೈಸ್ತಾ ನಾರ್ಝ್, ಆಡಳಿತ ನಿರ್ದೇಶಕಿ ಜಮೀಲಾ ಫಾತಿಮಾ ಹಾಗೂ ದಿ ಹೆಚ್‌ಆರ್‌ಎಸ್ ಶೋ ಸಂಸ್ಥಾಪಕ ಹಬೀಬ್ ಉರ್ ರೆಹಮಾನ್ ಶಹಾಬಾದಿ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಸಂಸ್ಥೆಯ ಅಧ್ಯಕ್ಷ ಅಬ್ದುಲ್ ಖದೀರ್ ಅವರು ಬೆಳಿಗ್ಗೆ ಮತ್ತು ಸಂಜೆ ಎರಡೂ ಅಧಿವೇಶನಗಳ ಅಧ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲ ಅಫ್ರಾನಾ ಝ್ ಅವರು ಎಲ್ಲರನ್ನು ಸ್ವಾಗತಿಸಿದರು.

ಮಹಿಳೆಯರಲ್ಲಿ ತಂತ್ರಜ್ಞಾನದ ಜ್ಞಾನ, ಆತ್ಮವಿಶ್ವಾಸ ಮತ್ತು ಡಿಜಿಟಲ್ ಜಾಗೃತಿ ಮೂಡಿಸುವ ಉದ್ದೇಶದಿಂದ ಆಯೋಜಿಸ ಲಾಗಿದ್ದ ಈ ಸಮಾರಂಭದಲ್ಲಿ ವಿವಿಧ ಸಂಸ್ಥೆಗಳ ನೂರಾರು ವಿದ್ಯಾರ್ಥಿನಿಯರು ಹಾಗೂ ಯುವತಿಯರು ಅತ್ಯಂತ ಉತ್ಸಾಹದಿಂದ ಭಾಗವಹಿಸಿದ್ದರು. ವಿಜೇತರಿಗೆ ಗಣ್ಯರ ಹಸ್ತಾಂತರದ ಮೂಲಕ ಬಹುಮಾನಗಳನ್ನು ವಿತರಿಸಲಾಯಿತು.

ವಿವಿಧ ಸ್ಪರ್ಧೆಗಳ ವಿಜೇತರು

1. ಕೃತಕ ಬುದ್ಧಿಮತ್ತೆ ರಸಪ್ರಶ್ನೆ ಸ್ಪರ್ಧೆ:

ಪ್ರಥಮ: ಚನ್ನಬಸವೇಶ್ವರ ಗುರುಕುಲ, ಭಾಲ್ಕಿಯ ವರ್ಷಾ ಶೇಖೋಬಾ ಮತ್ತು ಭಾಗ್ಯಶ್ರೀ ಭೂರೆ.
ದ್ವಿತೀಯ: ಕರ್ನಾಟಕ ಪದವಿ ಕಾಲೇಜು, ಬೀದರ್‌ನ ಅನಿಜಲ್ ಮತ್ತು ವರ್ಷಿಣಿ.
ತೃತೀಯ: ಹುಮನಾಬಾದ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಲಜೀನಾ ಬೇಗಂ ಮತ್ತು ಸೈಯದಾ ಫಾತಿಮಾ.

2. ಕೃತಕ ಬುದ್ಧಿಮತ್ತೆ ವಿಡಿಯೋ ತಯಾರಿಕೆ ಸ್ಪರ್ಧೆ:

ಪ್ರಥಮ: ಗುರುನಾನಕ್ ಪ್ರಥಮ ದರ್ಜೆ ಕಾಲೇಜು ಮತ್ತು ತಾಂತ್ರಿಕ ಮಹಾವಿದ್ಯಾಲಯ, ಬೀದರ್‌ನ ಮದಿಹಾ ಫಾತಿಮಾ ಮತ್ತು ಉಮ್ಮಾ.
ದ್ವಿತೀಯ: ಗುರುನಾನಕ್ ಪ್ರಥಮ ದರ್ಜೆ ಕಾಲೇಜಿನ ಸಂಜನಾ ಜ್ಯೋತಿ ಮತ್ತು ಚಂದ್ರಕಲಾ.
ತೃತೀಯ: ಅಲ್ ಅಮೀನ್ ಪದವಿ ಕಾಲೇಜಿನ ಹುಸ್ನೇನ್ ಹಜೇರಾ ಮತ್ತು ಸೈಯದಾ ಫಾತಿಮಾ ಬೇಗಂ.

3. ಪಿಪಿಟಿ ಪ್ರಬಂಧ ಮಂಡನೆ ಸ್ಪರ್ಧೆ:

ಪ್ರಥಮ: ಬಸವಕಲ್ಯಾಣದ ಇಕ್ರಾ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಝ್ಯೂನಬ್ ಶೇಖ್ ಮತ್ತು ಜುನೇರಾ ಕಶಾಫ್.
ದ್ವಿತೀಯ: ಬೀದರ್‌ನ ಜ್ಞಾನಸುಧಾ ಪದವಿ ಕಾಲೇಜಿನ ಕೀರ್ತಿ ಪಂಚಾಲ್.
ತೃತೀಯ: ಗುರುನಾನಕ್ ದೇವ್ ತಾಂತ್ರಿಕ ಮಹಾವಿದ್ಯಾಲಯದ ಅಮೃತ್ ಅಜೇಜ್.

ಪ್ರತಿವರ್ಷ 25 ಮಕ್ಕಳಿಗೆ ಉಚಿತ ಶಿಕ್ಷಣ: ಡಾ.ಪಟ್ಟದ್ದೇವರು

ಭಾಲ್ಕಿ ಮಠದ ಬಾಲಕರ ವಸತಿ ಶಾಲೆ ಪ್ರಾರಂಭ | ಮೇ 31ಕ್ಕೆ ಆಯ್ಕೆ ಪ್ರಕ್ರಿಯೆ

ಉದಯಕಾಲ ನ್ಯೂಸ್

ಭಾಲ್ಕಿ: ಹಿರೇಮಠ ಸಂಸ್ಥಾನದಲ್ಲಿ ಪ್ರಸ್ತುತ ವರ್ಷದಿಂದ ಬಾಲಕರ ವಸತಿ ಶಾಲೆ ಪ್ರಾರಂಭಿಸಿ 25 ಬಡ ಮಕ್ಕಳಿಗೆ ಉಚಿತ ಶಿಕ್ಷಣ, ಅನ್ನ, ಆಶ್ರಯ ನೀಡಲು ನಿರ್ಧರಿಸಲಾಗಿದೆ ಎಂದು ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್‌ನ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹೇಳಿದರು.

ನಗರದ ಹಿರೇಮಠ ಸಂಸ್ಥಾನದಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್‌ನ ವತಿಯಿಂದ 2026-27ನೇ ಸಾಲಿನ ಭಾಲಿ ಮಠದ ಬಾಲಕರ ವಸತಿ ಶಾಲೆಯ ಕರಪತ್ರ ಬಿಡುಗಡೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಶ್ರೀಮಠದಲ್ಲಿ ಬಡ, ಅನಾಥ ಮಕ್ಕಳಿಗೆ, ಶಿಕ್ಷಣ ಮತ್ತು ಸಂಸ್ಕಾರ ದೊರೆಯಬೇಕೆಂದು ಶ್ರೀಮಠದಲ್ಲಿ ಉಚಿತ ವಸತಿ ಶಾಲೆಯನ್ನು ಪ್ರಾರಂಭಿಸಲಾಗಿದೆ.

ಈ ವರ್ಷ 1ನೇ ತರಗತಿಗೆ 25 ಮಕ್ಕಳಿಗೆ ಪ್ರವೇಶ ನೀಡಲಾಗುತ್ತದೆ. 1ನೇ ತರಗತಿಗೆ ಪ್ರವೇಶ ಪಡೆದ ಮಕ್ಕಳಿಗೆ 10ನೇ ತರಗತಿವರೆಗೆ ಶಿಕ್ಷಣ, ಊಟ ಮತ್ತು ವಸತಿ ಉಚಿತವಾಗಿ ನೀಡಲಾಗುತ್ತದೆ. ತಂದೆ-ತಾಯಿ ಇಲ್ಲದ ಬಡಮಕ್ಕಳಿಗೆ ಮೊದಲ ಆದ್ಯತೆ ನೀಡಲಾಗುವುದು.

ಇಂತಹ ಮಕ್ಕಳ ಪ್ರವೇಶಕ್ಕಾಗಿ ಮೇ 31ಕ್ಕೆ ಆಯ್ಕೆ ಪ್ರಕ್ರಿಯೆ ನಡೆಯಲ್ಲಿದ್ದು, ಅರ್ಹರು ಅಂದು ಶ್ರೀಮಠದಲ್ಲಿ ಹಾಜರಿರಬೇಕು ಎಂದರು.

ಕರಪತ್ರ ಬಿಡುಗಡೆಗೊಳಿಸಿದ ಜಗನ್ನಾಥ ಹಲಂಗೆ ಮಾತನಾಡಿ, ಭಾಲ್ಕಿ ಶ್ರೀಮಠ ಮಾಡುತ್ತಿರುವ ಶೈಕ್ಷಣಿಕ ಸೇವೆ ಅಪೂರ್ವವಾಗಿದೆ. ಶ್ರೀಮಠದಲ್ಲಿ ಬಡಮಕ್ಕಳಿಗೆ ಪೂಜ್ಯರುಸುವರ್ಣಾ ಅವಕಾಶನೀಡಿದ್ದಾರೆ.ಬಡತನದಿಂದ ಶಿಕ್ಷಣದಿಂದ ಯಾರೂ ವಂಚಿತರಾಗಬಾರದೆಂಬ ಉದ್ದೇಶ ಪೂಜ್ಯರು ಹೊಂದಿದ್ದಾರೆ.

ಪೂಜ್ಯರಈಸಮಾಜಿಕಕಳಕಳಿ ಅಭಿನಂದನೀಯವಾಗಿದೆ ಎಂದು ನುಡಿದರು. ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಅನೀಲ ಮಹಾರಾಜರು ಸಮ್ಮುಖ ವಹಿಸಿದ್ದರು. ಗುಂಡಪ್ಪ ಸಂಗಮಕರ, ಎಂ.ಪಿ. ರಾಠೋಡ, ಶ್ರೀಚಂದ ಪವಾರ್ ಸೇರಿದಂತೆ ಹಲವರು ಇದ್ದರು

ಜಾನಪದ ಕಲೆಗೆ ಉತ್ತೇಜನ ನೀಡಿ

ಬೀದರ್: ಜಾನಪದ ಕಲೆಗೆ ಉತ್ತೇಜನ ನೀಡುವ ಕೆಲಸ ಆಗಬೇಕು ಎಂದುಕರ್ನಾಟಕಗಡಿ ಪ್ರದೇಶಅಭಿವೃದ್ಧಿ ಪ್ರಾಧಿಕಾರದ ಸದಸ್ಯಡಾ. ಸಂಜೀವಕುಮಾರ ಅತಿವಾಳೆ ಹೇಳಿದರು. ಶ್ರೀ ಕೇತಕಿ ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಸ್ಥೆ ಹಾಗೂ ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿಇಲ್ಲಿಯಮೈಲೂರುಕ್ರಾಸ್‌ನಲ್ಲಿರುವ ಮಹಾಲಕ್ಷ್ಮಿ ಸಭಾಂಗಣದಲ್ಲಿಈಚೆಗೆ ಆಯೋಜಿಸಿದ್ದ ಜಿಲ್ಲಾಮಟ್ಟದ ಸಂಗೀತರಸಮಂಜರಿ ಹಾಗೂ ಜಾನಪದ ಸಾಂಸ್ಕೃತಿಕಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಗಣೇಶ ಸಿ.ಎ ಹಾಗೂ ತಂಡದವರುಜಾನಪದಗೀತೆ, ಸೃಜನ್ಯ ಮತ್ತುತಂಡ ಭಾವಗೀತೆ, ಭವಾನಿ ಶಿವಕುಮಾರ ಹಾಗೂ ತಂಡಕನ್ನಡಗೀತೆ, ಅಶ್ವಿನಿ ರಾಜಕುಮಾರ ಹಿರೇಮಠದಂಪತಿ ಸುಗಮ ಸಂಗೀತ, ಪ್ರಕಾಶಕುಲಕರ್ಣಿ ಮತ್ತುತಂಡದವರುಹಾಸ್ಯ ಹಾಗೂ ಗಾಯನನಡೆಸಿಕೊಟ್ಟರು. ಕುಮಾರ ಬಸವ ಪ್ರಸಾದ್, ತಬಲಾ ಪ್ರತೀಕ್ ಹಾಗೂ ತಂಡವದರುತಬಲಾ ಸೋಲೋ, ನಾಟ್ಯಶ್ರೀ ನೃತ್ಯಾಲಯದರಾಣಿ ಸತ್ಯಮೂರ್ತಿ ಭರತನಾಟ್ಯ, ಶ್ರೀದೇವಿ ಮತ್ತುತಂಡ ಭಜನೆ, ದೇವಗಿರಿತಾಂಡಾದ ಸೇವಾಲಾಲ ಕಲಾ ತಂಡ ಲಂಬಾಣಿ ನೃತ್ಯ, ಜೈ ಭವಾನಿ ರಂಗ ಭೂಮಿಕಲಾವಿದರ ಸಂಘ ಹಲಗೆ ಹಾಗೂ ಚಿನ್ನಮ್ಮ ಲಾಧಾ ಮತ್ತುತಂಡದವರು ಡೊಳ್ಳು ಕುಣಿತ ಪ್ರದರ್ಶಿಸಿದರು. ಹೆಚ್ಚುವರಿಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಚಂದ್ರಕಾಂತ ಪೂಜಾರಿ, ರಾಷ್ಟ್ರೀಯ ಭ್ರಷ್ಟಾಚಾರ ನಿರ್ಮೂಲನೆ ಕಾರ್ಯಾಚರಣೆ ಸಮಿತಿಯಅಧ್ಯಕ್ಷಅನಂತರೆಡ್ಡಿ, ಹಿರಿಯ ಸಾಹಿತಿಎಂ.ಜಿ.ದೇಶಪಾಂಡೆ, ಉದ್ಯಮಿರವಿ ದುರ್ಗೆ, ಮುಖಂಡ ಬಸವರಾಜ ಶಹಾಪುರೆ, ಕರಂ ಫೌಂಡೇಷನ್ ಅಧ್ಯಕ್ಷ ಸರ್ದಾರ್ ಮನ್ಪ್ರೀತ್‌ಸಿಂಗ್ ಇದ್ದರು.ವೀಂದ್ರಚವಾಣ್ ಸ್ವಾಗತಿಸಿದರು. ಪರಮೇಶ ಡಿ. ವಿಳಾಸಪುರ ನಿರೂಪಿಸಿದರು.ಸಂಗಮೇಶ ಶಹಾಪುರೆ ವಂದಿಸಿದರು.

21 ದಿನಗಳ ಉಪವಾಸ ಸತ್ಯಾಗ್ರಹ ಅಂತ್ಯ

ಉದಯಕಾಲ ನ್ಯೂಸ್

ಔರಾದ್: ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಎಸ್‌ಐಆರ್ ಹಾಗೂ ಇವಿಎಂ ರದ್ದುಗೊಳಿಸುವಂತೆ ಆಗ್ರಹಿಸಿ ಪಟ್ಟಣದ ನಿವಾಸಿ ಗೋಪಾಲಸಿಂಗ್ ಠಾಕೂರ್ ನಡೆಸುತ್ತಿದ್ದ 21 ದಿನಗಳ ಏಕಾಂಗಿ ಉಪವಾಸ ಸತ್ಯಾಗ್ರಹ ಶನಿವಾರ ಅಂತ್ಯಗೊಂಡಿದೆ. ಪಟ್ಟಣದ ಮಿನಿ ವಿಧಾನಸೌಧ ಎದುರು ವೋಟ್ ಸತ್ಯಾಗ್ರಹ ಹೆಸರಿನಲ್ಲಿ ಮೇ 3ರಿಂದ ಕೇವಲ ನೀರು ಸೇವಿಸಿ ಉಪವಾಸ ಆರಂಭಿಸಿದ್ದ ಅವರು, ತಮ್ಮ ಬೇಡಿಕೆಗಳನ್ನು ರಾಷ್ಟ್ರಪತಿಗಳಿಗೆ ಹಕ್ಕೊತ್ತಾಯ ಪತ್ರದ ಮೂಲಕ ರವಾನಿಸಲು ಜಿಲ್ಲಾಡಳಿತವನ್ನು ಒತ್ತಾಯಿಸಿದ್ದರು. ರಾಷ್ಟ್ರಪತಿಗಳಿಂದ ಸ್ಪಂದನೆ ಸಿಗುವವರೆಗೂ ಹೋರಾಟ ಮುಂದುವರಿಸುವುದಾಗಿ ಘೋಷಿಸಿದ್ದರು.

ಉಪವಾಸ 17ನೇ ದಿನಕ್ಕೆ ತಲುಪಿದಾಗ ಆರೋಗ್ಯದಲ್ಲಿ ಏರುಪೇರು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಅವರನ್ನು

ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು. ನಂತರ ಚೇತರಿಸಿಕೊಂಡ ಅವರು ಮತ್ತೆ ಧರಣಿ ಸ್ಥಳಕ್ಕೆ ಮರಳಿ ಹೋರಾಟ ಮುಂದುವರೆಸಿದರು. ಶನಿವಾರ ಬೀದರ್ ಜಿಲ್ಲಾ ಎಸ್‌ಐಆರ್ ವಿರೋಧಿ ಸಮಿತಿಯ ಮುಖಂಡರು ಧರಣಿ ಸ್ಥಳಕ್ಕೆ ಭೇಟಿ ನೀಡಿ, ಆರೋಗ್ಯದ ಹಿತದೃಷ್ಟಿಯಿಂದ ಸತ್ಯಾಗ್ರಹ ಹಿಂಪಡೆಯುವಂತೆ ಮನವೊಲಿಸಿದರು. ತಹಸೀಲ್ದಾರ್ ಮಹೇಶ್ ಪಾಟೀಲ್ ಹಾಗೂ ಸಮಿತಿಯ ಮುಖಂಡರು ಗೋಪಾಲ್ ಸಿಂಗ್ ಠಾಕೂರ್ ಅವರಿಗೆ ಎಳೆನೀರು ಕುಡಿಸಿ ಸತ್ಯಾಗ್ರಹ ಅಂತ್ಯಗೊಳಿಸಿದರು.

ಪೂಜ್ಯ ಸಿದ್ಧರಾಮ ಶರಣರು ಬೆಲ್ದಾಳ, ಅಬ್ದುಲ್ ಮನ್ನಾನ್ ಸೇಠ್, ಬಾಬುರಾವ್ ಹೊನ್ನಾ, ಓಂಪ್ರಕಾಶ ರೊಟ್ಟೆ ಹಾಗೂ ಮಹೇಶ್ ಗೋರನಾಳಕರ್ ಮಾತನಾಡಿ, ದೇಶದಲ್ಲಿ ಪ್ರಜಾತಂತ್ರಕ್ಕೆ ಗಂಡಾಂತರ ಎದುರಾಗಿದೆ. ಎಸ್‌ಐಆರ್ ಮತ್ತು ಇವಿಎಂ ಹೆಸರಿನಲ್ಲಿ ಜನರ ಹಕ್ಕು ಕಸಿಯುವ ವ್ಯವಸ್ಥಿತ ಹುನ್ನಾರ ನಡೆಯುತ್ತಿದೆ. ಪ್ರಜಾಪ್ರಭುತ್ವ ದೇಶದಲ್ಲಿ ಸರ್ವಾಧಿಕಾರ ಆಡಳಿತಕ್ಕೆ ವಿರೋಧವಾಗಿ ಸಂಘಟಿತ ಹೋರಾಟ ಅಗತ್ಯವಾಗಿದೆ ಎಂದು ಹೇಳಿದರು. 21 ದಿನಗಳ ನಿರಂತರ ಉಪವಾಸ ಸತ್ಯಾಗ್ರಹ ದೇಶದ ಪ್ರಜಾತಂತ್ರ ಮೌಲ್ಯಗಳ ರಕ್ಷಣೆಗೆ ಮಾದರಿಯಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಪ್ರಜಾತಂತ್ರ ಉಳಿವಿಗೆ ಹೋರಾಟ

ಸತ್ಯಾಗ್ರಹ ಹಿಂಪಡೆದ ಬಳಿಕ ಮಾತನಾಡಿದ ಗೋಪಾಲ್ ಸಿಂಗ್ ಠಾಕೂರ್, ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಹಕ್ಕು ಕಸಿಯುವ ಕೆಲಸ ಆಗಬಾರದು. ಎಸ್ ಐಆರ್ ಮತ್ತು ಇವಿಎಂ ಮೂಲಕ ಪ್ರಜಾತಂತ್ರ ದುರ್ಬಲಗೊಳ್ಳುತ್ತಿದೆ. ಗಾಂಧೀಜಿಯವರ ಅಹಿಂಸಾ ಮಾರ್ಗದಲ್ಲಿ ಹೋರಾಟ ನಡೆಸಿದ್ದೇನೆ. ಯುವಜನತೆ ದೇಶದ ವಿಚಾರಗಳಲ್ಲಿ ಚಿಂತನೆ ನಡೆಸಬೇಕು ಎಂದರು.

ಮಾಜಿ ವಿಧಾನ ಪರಿಷತ್ ಸದಸ್ಯ ಕೆ. ಪುಂಡಲಿಕರಾವ್, ಅರವಿಂದಕುಮಾರ ಅರಳಿ, ಮಾರುತಿ ಬೌದ್ಧೆ, ಡಾ.ಫಯಾಜ್, ಬಂಟಿ ದರ್ಬಾರೆ, ಶರಣಪ್ಪ ಪಾಟೀಲ್, ಅಮೀರೋದ್ದಿನ್, ಜಗದೀಶ್ವರ ಬಿರಾದಾರ, ರಜೀಯಾ ಬಳಬಟ್ಟಿ, ಮಂಜುಳಾ, ರಾಮಣ್ಣ ಒಡೆಯರ್, ಶಿವಮೂರ್ತಿ ಸುಬಾನೆ, ಓಂಪ್ರಕಾಶ ರೊಟ್ಟೆ, ಬಾಬುರಾವ್ ಹೊನ್ನಾ, ಪ್ರಕಾಶ ರಾವಣ, ಚಂದ್ರಶೇಖರ್ ಪಾಟೀಲ್ ಹೊಚಕನಳ್ಳಿ, ಸುಭಾಷ ಲಾಧಾ, ಗಣಪತಿ ವಾಸುದೇವ ಸೇರಿದಂತೆ ಹಲವರು

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಗೆ ಜಾನಸನ್ ಘೋಡೆ ಖಂಡನೆ

ಉದಯಕಾಲ ನ್ಯೂಸ್

ಬೀದರ್: ಪದೇ ಪದೇ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡುತ್ತಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಕ್ರಮ ತೀವ್ರ ಖಂಡನೀಯ ಎಂದು ಕಾಂಗ್ರೆಸ್ ಕಿಸಾನ್ ವಿಭಾಗದ ರಾಷ್ಟ್ರೀಯ ಜಂಟಿ ಸಂಯೋಜಕ ಜಾನಸನ್ ಘೋಡೆ ಹೇಳಿದ್ದಾರೆ.

ಹತ್ತು ದಿನಗಳಲ್ಲೇ ಮೂರು ಬಾರಿ ತೈಲ ಬೆಲೆ ಹೆಚ್ಚಿಸಿರುವುದು ಜನಸಾಮಾನ್ಯರಿಗೆ ಆಘಾತ ಉಂಟು ಮಾಡಿದೆ ಎಂದು ತಿಳಿಸಿದ್ದಾರೆ.

ಇಂಧನ ಬೆಲೆ ಏರಿಕೆಯಿಂದ ದಿನ ಬಳಕೆ ವಸ್ತುಗಳ ಬೆಲೆ ಏರಿಕೆಯಾಗುತ್ತಿದೆ. ಕೃಷಿ ವೆಚ್ಚವೂ ಹೆಚ್ಚಾಗುತ್ತಿದೆ. ಇದರಿಂದ ಬಡವರು, ಕೂಲಿ ಕಾರ್ಮಿಕರು, ರೈತರು, ಮಧ್ಯಮ ವರ್ಗದವರು ಬಹಳ ಸಂಕಷ್ಟ ಎದುರಿಸಬೇಕಾಗಿದೆ ಎಂದು ಹೇಳಿದ್ದಾರೆ.

ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್ ಮೇಲಿನ ತೆರಿಗೆ ಕಡಿತಗೊಳಿಸಬೇಕು. ಜನಸಾಮಾನ್ಯರ ಹಿತ ರಕ್ಷಣೆಗೆ ಈಗಾಗಲೇ ಮಾಡಲಾದ ಬೆಲೆ ಏರಿಕೆಯನ್ನು ಹಿಂದಕ್ಕೆ ಪಡೆಯಬೇಕು ಎಂದು ಆಗ್ರಹಿಸಿದ್ದಾರೆ.

OMKARA ASSETS RECONSTRUCTION PVT LTD

ಓಂಕಾರ ಆಸ್ತಿ ಪುನರ್ನಿರ್ಮಾಣ ಪ್ರೈ. ಲಿ.
ಸಿಐಎನ್: U67100TZ2014PTC020363
ಕಾರ್ಪೊರೇಟ್ ಕಚೇರಿ: ಕೊಹಿನೂರ್ ಸ್ಕ್ವೇರ್, 47ನೇ ಮಹಡಿ, ಎನ್.ಸಿ.ಕೇಲ್ಕರ್ ಮಾರ್ಗ RG ಗಡ್ಕರಿ ಚೌಕ್, ದಾದರ್ (ಪಶ್ಚಿಮ), ಮುಂಬೈ-400028
ನೋಂದಾಯಿತ ಕಚೇರಿ ವಿಳಾಸ: ನಂ. 9, ಎಂ.ಪಿ. ನಗರ, 1ನೇ ಬೀದಿ, ಕೊಂಗು ನಗರ ವಿಸ್ತರಣೆ, ತಿರುಪುರ್-641607
ಇಮೇಲ್: karthi.govindasamy@omkaraarc.com
ಅಧಿಕೃತ ಅಧಿಕಾರಿ ಮೊಬೈಲ್ ಸಂಖ್ಯೆ: +91-9344684194/9884062068/9962333307

[ಅನುಬಂಧ - IV-A] [ನಿಯಮ 8 (6) r/w 9(1) ರ ನಿಬಂಧನೆಯನ್ನು ನೋಡಿ

ಸ್ಥಿರ ಆಸ್ತಿಗಳ ಇ-ಹರಾಜು ಮಾರಾಟಕ್ಕೆ ಸಾರ್ವಜನಿಕ ಸೂಚನೆ

2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8 (6) r/w 9(1) ರ ನಿಬಂಧನೆಯೊಂದಿಗೆ ಓದಲಾದ ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002 (**SARFAESI ಕಾಯ್ದೆ**") ಅಡಿಯಲ್ಲಿ ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಸೂಚನೆ.
ಈ ಮೂಲಕ ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ಸಾಲಗಾರರು ಮತ್ತು ಖಾತರಿದಾರರು ಮತ್ತು ಅಡಮಾನದಾರರಿಗೆ ಸೂಚನೆ ನೀಡಲಾಗಿದೆ, ಈ ಕೆಳಗೆ ವಿವರಿಸಿದ ಸ್ಥಿರ ಆಸ್ತಿಯನ್ನು (ಗಳು) ಸುರಕ್ಷಿತ ಸಾಲಗಾರರಿಗೆ ವಿಧಿಸಲಾಗಿದ್ದು, ಓಂಕಾರ ಅಸೆಟ್ಸ್ ರೀಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ (OARPL) ದ್ವೀಪದ ಅಧಿಕೃತ ಅಧಿಕಾರಿಯು ಇದರ ಸ್ವಾಧೀನವನ್ನು ಪಡೆದುಕೊಂಡಿದ್ದಾರೆ, ಇದನ್ನು ಇ-ಹರಾಜಿನ ಮೂಲಕ ಮಾರಾಟ ಮಾಡಲು ಪ್ರಸ್ತಾಪಿಸಲಾಗಿದೆ. ಇದಲ್ಲದೆ, ಓಂಕಾರ ಅಸೆಟ್ಸ್ ರೀಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ (DARPL) (ಓಂಕಾರ PS 22/2020-21 ಟ್ರಸ್ಟ್ ಟ್ರಸ್ಟಿಯಾಗಿ ಅಧಿಕಾರ ವಹಿಸಿಕೊಂಡಿದೆ) 26.02.2021 ರಂದು ಫುಲ್ಲರ್ಟನ್ ಇಂಡಿಯಾ ಕ್ರೆಡಿಟ್ ಕಂಪನಿ ಲಿಮಿಟೆಡ್ (ಅಸ್ಸೈನರ್ ಕಂಪನಿ) ಯಿಂದ ನಿಯೋಜಕ ಕಂಪನಿಯಿಂದ ಆಧಾರವಾಗಿರುವ ಭದ್ರತೆಯೊಂದಿಗೆ ಕೆಳಗಿನ ಖಾತೆಗಳ ಸಂಪೂರ್ಣ ಬಾಕಿ ಸಾಲಗಳನ್ನು ಪಡೆದುಕೊಂಡಿದೆ. ಅದರಂತೆ. OARPL ನಿಯೋಜಕ ಕಂಪನಿಯ ಸ್ಥಾನವನ್ನು ಪಡೆದುಕೊಂಡಿದೆ ಮತ್ತು ಬಾಕಿಗಳನ್ನು ವಸೂಲಿ ಮಾಡಲು ಮತ್ತು ಭದ್ರತೆಯನ್ನು ಜಾರಿಗೊಳಿಸಲು ಅಧಿಕಾರ ನೀಡಿದೆ. OARPL ನ ಅಧಿಕೃತ ಅಧಿಕಾರಿಯು ಬಾಕಿಗಳ ವಸೂಲಿಗಾಗಿ ಕೆಳಗೆ ತಿಳಿಸಲಾದ ಸುರಕ್ಷಿತ ಆಸ್ತಿಯನ್ನು (ಗಳು) ಮಾರಾಟ ಮಾಡಲು ಉದ್ದೇಶಿಸಿದ್ದಾರೆ. SARFAESI ಕಾಯ್ದೆಯ ಸೆಕ್ಷನ್ 13 (2) ಮತ್ತು (4) ರ ನಿಬಂಧನೆಗಳ ಅಡಿಯಲ್ಲಿ **"ಎಲ್ಲಿದೆಯೋ ಅಲ್ಲಿ", "ಹೇಗಿದೆಯೋ ಹಾಗೇ", "ಏನಿದೆಯೋ ಅದೇ" ಮತ್ತು "ಯಾವುದೇ ಆಧಾರವಿಲ್ಲದೆ"** ಆಧಾರದ ಮೇಲೆ ಆಸ್ತಿಯನ್ನು (ಗಳು) ಮಾರಾಟ ಮಾಡಲಾಗುತ್ತದೆ. ಕೆಳಗೆ ತೋರಿಸಿರುವ ಆಯಾ ಸಾಲಗಾರರು(ಗಳು) ಮತ್ತು ಸಹ-ಸಾಲಗಾರರಿಂದ ಸೆಕ್ಯೂರ್ಡ್ ಕ್ರೆಡಿಟ್ಟರ್ ಆಗಿ CARPL ಗೆ ಬಾಕಿ ಇರುವ ಮೊತ್ತವನ್ನು ವಸೂಲಿ ಮಾಡಲು. ಸಾಲಗಾರರು(ಗಳು)/ ಅಡಮಾನದಾರರು, ಖಾತರಿದಾರರು, ಸೆಕ್ಯುರಿಟೀಸ್, ಮಾಲೀಕರು, ಬಾಕಿಗಳು, ಸೆಕ್ಷನ್ 13 (2) ಅಡಿಯಲ್ಲಿ ಕಳುಹಿಸಲಾದ ಡಿಮ್ಯಾಂಡ್ ನೋಟಿಸ್ ದಿನಾಂಕ, ಸ್ವಾಧೀನ ದಿನಾಂಕ, ಮೀಸಲು ಬೆಲೆ, ಬಿಡ್ ಹೆಚ್ಚಳ ಮೊತ್ತ, ಸುಲಭ ಹಣ ಠೇವಣಿ (EMD) ವಿವರಗಳು. ಪರಿಶೀಲನೆಯ ದಿನಾಂಕ ಮತ್ತು ಸಮಯವನ್ನು ಕೆಳಗೆ ನೀಡಲಾಗಿದೆ.

ಕ್ರಮ ಸಂಖ್ಯೆ	ಸಾಲಗಾರ/ಸಹ-ಸಾಲಗಾರ ಖಾತರಿದಾರರು SARFAESI ಕಾಯ್ದೆಯ ಸೆಕ್ಷನ್ 13(2) ಅಡಿಯಲ್ಲಿ ಡಿಮ್ಯಾಂಡ್ ನೋಟಿಸ್ ದಿನಾಂಕ / ಭೌತಿಕ ಸ್ವಾಧೀನದ ದಿನಾಂಕ	ಆಸ್ತಿಯ ಮಾಲೀಕರು	ಸುರಕ್ಷಿತ ಆಸ್ತಿಯ ವಿವರಗಳು	ಆಸ್ತಿಯ ಸ್ವರೂಪ	25.05.2026 ರಂತೆ ಬಾಕಿ ಇರುವ ಮೊತ್ತ	ಮೀಸಲು ಬೆಲೆ/ ಬಿಡ್ ಹೆಚ್ಚಳ	ಮೀಸಲು ಬೆಲೆಯ EMD-10%	ತಪಾಸಣೆ ದಿನಾಂಕ/ಸಮಯ
LOT 1	ಶ್ರೀ ನಾರಾಯಣರಾವ್ S/o ಭೀಮರಾವ್ ಮತ್ತು ಶ್ರೀ ಕಿರಣ್ S/o. ನಾರಾಯಣರಾವ್ D/N ದಿನಾಂಕ 16.09.2021 01.01.2021 ರಂತೆ ರೂ. 7,47,868.37 ಭೌತಿಕ ಸ್ವಾಧೀನ ದಿನಾಂಕ. 12.12.2023	ಎಂ ನಾರಾಯಣರಾವ್ S/o ಭೀಮರಾವ್	ಆಸ್ತಿ ಹೊಂದಿರುವ ನಾರಾಯಣ ರಾವ್ ಅವರ ದಾಖಲೆ ಸಂಖ್ಯೆ 7034/2012-13dt 25.8.2012 SRO ರಾಯಚೂರು ಗೆ ಸೇರಿದ್ದು, ಪುರಸಭೆ ಸಂಖ್ಯೆ 5-1-86(C) 5-1-87(ಹೊಸದು) ಹೊಂದಿರುವ ಮನೆ ಆಸ್ತಿಯ ಎಲ್ಲಾ ಭಾಗವು ಒಟ್ಟು 855.24 ಚದರ ಅಡಿ ವಿಸ್ತೀರ್ಣವನ್ನು ಹೊಂದಿದೆ ಮತ್ತು ನೆಲಮಹಡಿ ಪೀಠದ ವಿಸ್ತೀರ್ಣ 885.24 ಚದರ ಅಡಿ ಮತ್ತು ಮೊದಲ ಮಹಡಿಯ ಪಿಂಟ್ ವಿಸ್ತೀರ್ಣ 492.06 ಚದರ ಅಡಿಗಳಾಗಿದ್ದು, ನೇತಾಜಿ ನಗರದಲ್ಲಿ (ಸೋಮವಾರಪೇಟೆ ರಾಯಚೂರು) ನೆಲೆಗೊಂಡಿದೆ ಮತ್ತು ಇದರ ಸುತ್ತುವರಿದ ಸ್ಥಳಗಳು: ಪೂರ್ವ: ರಾಘವೇಂದ್ರ ರಾವ್ ಅವರ ಮನೆ, ಪಶ್ಚಿಮ: ರಾಘವೇಂದ್ರ ಎ ಅವರ ಮನೆ, ಉತ್ತರ: ಮಾರ್ಗ, ದಕ್ಷಿಣ ಈರಮ್ಮ ಅವರ ಮನೆ ಮತ್ತು ಹೆಚ್ಚು ನಿರ್ದಿಷ್ಟವಾಗಿ ಮಾರಾಟ ಡೀಡ್ ದಾಖಲೆ ಸಂಖ್ಯೆ 7034/2012-2013 ದಿನಾಂಕ 25.8.2012 SRO ರಾಯಚೂರು	ವಸತಿ ಭೂಮಿ ಮತ್ತು ಕಟ್ಟಡ	ರೂ.74,04,981- ರೂ. ಎಪ್ಪತ್ತನಾಲ್ಕು ಲಕ್ಷ ನಾಲ್ಕು ಸಾವಿರದ ಒಂಬತ್ತು ನೂರ ಎಂಬತ್ತೊಂದು ಮಾತ್ರ)	ರೂ.8,00,000/- (ಎಂಟು ಲಕ್ಷ ರೂಪಾಯಿಗಳು ಮಾತ್ರ) ಬಿಡ್ ಹೆಚ್ಚಳ ಮೊತ್ತ ರೂ.5,000/- (ರೂ. ಐದು ಸಾವಿರ ಮಾತ್ರ)	ರೂ.80,000/ (ರೂ.ಎಂಭತ್ತು ಸಾವಿರ ಮಾತ್ರ)	ಮೇಲೆ ನೀಡಲಾದ ಅಧಿಕೃತ ಮೊಬೈಲ್ ಸಂಖ್ಯೆಗಳೊಂದಿಗೆ ಪೂರ್ವ ಅಪಾಯಿಂಟ್ಮೆಂಟ್ ಮೂಲಕ.

ಖಾತೆ ಸಂಖ್ಯೆ: 344905000929, ಫಲಾನುಭವಿಯ ಹೆಸರು: ಓಂಕಾರ ಪಿಎಸ್ 22/2020-21 ಟ್ರಸ್ಟ್, ಬ್ಯಾಂಕ್ ಹೆಸರು: ಐಸಿಐಸಿಐ ಬ್ಯಾಂಕ್, ಶಾಖೆ: ಬಾಂದ್ರಾ (ಇ), ಮುಂಬೈ, IFSC ಕೋಡ್: ಐಸಿಐಸಿ0003449

ಇ-ಹರಾಜಿನ ದಿನಾಂಕ ಮತ್ತು ಸಮಯ: 18ನೇ ಜೂನ್ 2026 (ಗುರುವಾರ) ಮಧ್ಯಾಹ್ನ 12.00 ರಿಂದ 01.00 ರವರೆಗೆ

ಭಾಗವಹಿಸುವಿಕೆಯ ಬಿಡ್ ಪತ್ರ/KYC ದಾಖಲೆ/EMD ಪುರಾವೆಯನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 16ನೇ ಜೂನ್ 2026 (ಮಂಗಳವಾರ) ಸಂಜೆ 4:00 ಗಂಟೆ ಅಥವಾ ಅದಕ್ಕೂ ಮೊದಲು.

ಹರಾಜಿನ ನಿಯಮಗಳು ಮತ್ತು ಷರತ್ತುಗಳು: ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ದಯವಿಟ್ಟು ಸೆಕ್ಯೂರ್ಡ್ ಕ್ರೆಡಿಟರ್‌ಗಳ (DARPL) ವೆಬ್‌ಸೈಟ್ hitpomkaraars.com/auction.php ಅಥವಾ ಸೇವಾ ಪೂರೈಕೆದಾರರ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಅನ್ನು ಉಲ್ಲೇಖಿಸಿ. https://www.banke.auctions.com

ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 86) r/w (1) ರ ಅಡಿಯಲ್ಲಿ ಮಾರಾಟಕ್ಕೆ ಶಾಸನಬದ್ಧ ಸೂಚನೆ, 2002
ಈ ಸೂಚನೆಯು ಮೇಲಿನ ಸಾಲ ಖಾತೆಯ ಸಾಲಗಾರರಿಗೆ ನಿಯಮ 86) (1), ಭದ್ರತಾ ಹಿತಾಸಕ್ತಿ (ಜಾರಿ) ನಿಯಮ, 2002 ಮತ್ತು ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002 ರ ನಿಬಂಧನೆಗಳ ಅಡಿಯಲ್ಲಿ ಕನಿಷ್ಠ 15 (ಹದಿನೈದು) ದಿನಗಳ ಕಡ್ಡಾಯ ಸೂಚನೆಯಾಗಿದೆ, ಮೇಲೆ ಉಲ್ಲೇಖಿಸಲಾದ ದಿನಾಂಕ ಮತ್ತು ಸಮಯದಲ್ಲಿ ಇ-ಹರಾಜಿನ ಮೂಲಕ ಹರಾಜು/ಮಾರಾಟವನ್ನು ನಡೆಸುವ ಬಗ್ಗೆ ಅವರಿಗೆ ತಿಳಿಸುತ್ತದೆ ಮತ್ತು ಅವರು ಬಯಸಿದರೆ ಆಸ್ತಿಗಳನ್ನು ಪುನಃ ಪಡೆದುಕೊಳ್ಳಲು ಸಲಹೆ ನೀಡುತ್ತದೆ, ಮೇಲೆ ಉಲ್ಲೇಖಿಸಿದಂತೆ ಬಾಕಿ ಇರುವ ಬಾಕಿಗಳನ್ನು 20.05.2026 ರಿಂದ ಹೆಚ್ಚಿನ ಬಡ್ಡಿಯೊಂದಿಗೆ ಮತ್ತು ಮಾರಾಟದ ಮುಕ್ತಾಯದ ಮೊದಲು ಯಾವುದೇ ಸಮಯದಲ್ಲಿ ಎಲ್ಲಾ ವೆಚ್ಚ ಶುಲ್ಕಗಳು ಮತ್ತು ವೆಚ್ಚಗಳೊಂದಿಗೆ ಪಾವತಿಸಿ. ಪಾವತಿಯಲ್ಲಿ ಡೀಫಾಲ್ಟ್ ಸಂದರ್ಭದಲ್ಲಿ, ಅಧಿಕೃತ ಅಧಿಕಾರಿ ಸುರಕ್ಷಿತ ಸಾಲಗಾರರ ವಿವೇಚನೆಯಿಂದ ಆಸ್ತಿಯನ್ನು ಭದ್ರತಾ ಬಡ್ಡಿ ಜಾರಿ ನಿಯಮ, 2002 ರ ನಿಯಮ (5) ರ ಅಡಿಯಲ್ಲಿ ಸೂಚಿಸಲಾದ ಯಾವುದೇ ವಿಧಾನಗಳ ಮೂಲಕ ಮಾರಾಟ ಮಾಡಲಾಗುತ್ತದೆ.

(ಕಾರ್ತಿ ಗೋವಿಂದಸ್ವಾಮಿ)
ಮೊಬೈಲ್ ಸಂಖ್ಯೆ. 9344654194
ಅಧಿಕೃತ ಅಧಿಕಾರಿ,
ಓಂಕಾರ ಅಸೆಟ್ಸ್ ರೀಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್.
(ಓಂಕಾರ ಪಿಎಸ್ 22/2020-21 ಟ್ರಸ್ಟ್ನ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತಿದೆ)

ದಿನಾಂಕ: 26.05.2026
ಸ್ಥಳ: ಚೆನ್ನೈ

OMKARA ASSETS RECONSTRUCTION Pvt. Ltd.
ಓಂಕಾರ ಅಸೆಟ್ಸ್ ರೀಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್
ನೋಂದಾಯಿತ ಕಛೇರಿ 9, M.P ನಗರ, 1 ನೇ ಬೀದಿ, ಕೊಂಗು ನಗರ ಎಕ್ಸ್‌ಟೆನ್ಷನ್, ತಿರುಪ್ಪೂರ್-641607
ಕಾರ್ಪೊರೇಟ್ ಕಚೇರಿ: ಕೊಹಿನೂರ್ ಸ್ಕ್ವೇರ್, 47 ನೇ ಮಹಡಿ, ಎನ್.ಸಿ ಕೇಳ್ಕರ್ ಮಾರ್ಗ, ಆರ್.ಜಿ. ಗಡ್ಕರಿ ಚೌಕ್, ದಾದರ್(ಪಶ್ಚಿಮ), ಮುಂಬೈ 400028 ದೂರವಾಣಿ: 022-69231111

ಸ್ವಾಧೀನ ಸೂಚನೆ (ಸ್ಥಿರ ಆಸ್ತಿಗಾಗಿ)

2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8(1) ರೊಂದಿಗೆ ಓದಲಾದ ಅನುಬಂಧ IV
ಏಕೆಂದರೆ, ಕೆಳಗೆ ಸಹಿ ಮಾಡಿರುವವರು **ಓಂಕಾರ ಅಸೆಟ್ಸ್ ರೀಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ (OARPL)** ನ ಅಧಿಕೃತ ಅಧಿಕಾರಿಯಾಗಿದ್ದು, ಕಂಪನಿ ಕಾಯ್ದೆ, 1956 ರ ನಿಬಂಧನೆಗಳ ಅಡಿಯಲ್ಲಿ ಸಂಯೋಜಿಸಲ್ಪಟ್ಟ ಕಂಪನಿಯಾಗಿದ್ದು, ಭಾರತೀಯ ರಿಸರ್ವ್ ಬ್ಯಾಂಕ್ (RBI) ನಲ್ಲಿ ಆಸ್ತಿ ಪುನರ್ನಿರ್ಮಾಣ ಕಂಪನಿಯಾಗಿ ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002 (2002 ರ 54) ("SARFAESI ಕಾಯ್ದೆ, 2002") ನ ಸೆಕ್ಷನ್ 3 ರ ಅಡಿಯಲ್ಲಿ ನೋಂದಾಯಿಸಲ್ಪಟ್ಟಿದೆ, CIN ಸಂಖ್ಯೆ U67100TZ2014PTC020363 ಮತ್ತು ಅದರ ನೋಂದಾಯಿತ ಕಚೇರಿ 9, M.P ನಗರ, 1 ನೇ ಬೀದಿ, ಕೊಂಗು ನಗರ ಎಕ್ಸ್‌ಟೆನ್ಷನ್, ತಿರುಪ್ಪೂರ್ 641607 ಮತ್ತು ಕೊಹಿನೂರ್ ಸ್ಕ್ವೇರ್, 47 ನೇ ಮಹಡಿ, N. C. ಕೇಳ್ಕರ್ ಮಾರ್ಗ, R.G. ಗಡ್ಕರಿ ಚೌಕ್, ದಾದರ್ (ಪಶ್ಚಿಮ), ಮುಂಬೈ - 400028 ನಲ್ಲಿ ಕಾರ್ಪೊರೇಟ್ ಕಚೇರಿಯನ್ನು ಹೊಂದಿದ್ದು, **ಓಂಕಾರ PS26/2024-25 ರ ಟ್ರಸ್ಟಿಯಾಗಿ** ಕಾರ್ಯನಿರ್ವಹಿಸುತ್ತಿದೆ. ಟ್ರಸ್ಟ್, 27.03.2025 ರ ನಿಯೋಜನೆ ಒಪ್ಪಂದದ ಮೂಲಕ, SBFC ಫೈನಾನ್ಸ್ ಲಿಮಿಟೆಡ್ (ಇನ್ನು ಮುಂದೆ ನಿಯೋಜಕ ಹಣಕಾಸು ಸಂಸ್ಥೆ ಎಂದು ಉಲ್ಲೇಖಿಸಲಾಗುತ್ತದೆ) ನಿಂದ ಆಧಾರವಾಗಿರುವ ಸೆಕ್ಯುರಿಟಿಗಳೊಂದಿಗೆ, **ಸಾಲ ಖಾತೆ ಸಂಖ್ಯೆ PR01280154 ಹೊಂದಿರುವ ಅನಿಲ್ ನಾಮದೇವ (ಸಾಲಗಾರ/ ಅಡಮಾನದಾರ) ಮತ್ತು ಸುಶೀಲಾ ನಾಮದೇವ್, ಸುನಿಲ್ ನಾಮದೇವ್ (ಸಹ-ಅರ್ಜಿದಾರ/ ಅಡಮಾನದಾರ/ ಖಾತರಿದಾರರು)** ಅವರ ಸಂಪೂರ್ಣ ಬಾಕಿಯ ಎಲ್ಲಾ ಹಕ್ಕುಗಳು, ಶೀರ್ಷಿಕೆಗಳು ಮತ್ತು ಆಸಕ್ತಿಯನ್ನು ಪಡೆದುಕೊಂಡಿದೆ. ಮತ್ತು, ಹಣಕಾಸು ಆಸ್ತಿಯ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002 ರ ಅಡಿಯಲ್ಲಿ ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 3 ರೊಂದಿಗೆ ಓದಲಾದ ಸೆಕ್ಷನ್ 13(12) ಅಡಿಯಲ್ಲಿ ನೀಡಲಾದ ಅಧಿಕಾರಗಳನ್ನು ಚಲಾಯಿಸಿ, ನಿಯೋಜಿತ ಹಣಕಾಸು ಸಂಸ್ಥೆಯ ಅಧಿಕೃತ ಅಧಿಕಾರಿಯು 30/06/2025 ರಂದು ಡಿಮ್ಯಾಂಡ್ ನೋಟಿಸ್ ಅನ್ನು ನೀಡಿದ್ದು, ಸಾಲಗಾರರು/ ಅಡಮಾನದಾರರು/ಸಹ-ಸಾಲಗಾರರು/ಜಾಮೀನುದಾರರು 30.06.2025 ರಂತೆ ಒಟ್ಟು **ರೂ. 9,11,382/- (ರೂಪಾಯಿ ಒಂಬತ್ತು ಲಕ್ಷ ಹನ್ನೊಂದು ಸಾವಿರದ ಮೂರು ನೂರ ಎಂಬತ್ತೆರಡು ಮಾತ್ರ)** ನೋಟಿಸ್‌ನಲ್ಲಿ ಉಲ್ಲೇಖಿಸಲಾದ ಮೊತ್ತವನ್ನು ಮರುಪಾವತಿಸಲು ಕರೆ ನೀಡಿದ್ದಾರೆ. ಜೊತೆಗೆ ಸಂಚಿತ ಬಡ್ಡಿ/ ಅವಾಸ್ತವಿಕವಲ್ಲದ ಬಡ್ಡಿಯನ್ನು ಒಪ್ಪಂದದ ದರ(ಗಳು) ಜೊತೆಗೆ ಪ್ರಾಸಂಗಿಕ ವೆಚ್ಚಗಳು, ವೆಚ್ಚಗಳು, ಶುಲ್ಕಗಳು ಇತ್ಯಾದಿಗಳಲ್ಲಿ, ಸೂಚನೆಯನ್ನು ಸ್ವೀಕರಿಸಿದ ದಿನಾಂಕದಿಂದ 60 ದಿನಗಳಲ್ಲಿ ಪಾವತಿಯ ದಿನಾಂಕದವರೆಗೆ ಪಾವತಿಸಬೇಕು.
ಸಾಲಗಾರ/ಸಹ-ಸಾಲಗಾರರು/ಖಾತರಿದಾರರು ಮೊತ್ತವನ್ನು ಮರುಪಾವತಿಸಲು ವಿಫಲರಾಗಿರುವುದರಿಂದ ಮತ್ತು ನಿಯೋಜನೆ ಒಪ್ಪಂದದ ಪ್ರಕಾರ OARPL ನಿಯೋಜಕ ಹಣಕಾಸು ಸಂಸ್ಥೆಯ ಸ್ಥಾನವನ್ನು ಪಡೆದುಕೊಂಡಿದೆ ಮತ್ತು ಸಂಪೂರ್ಣ ಬಾಕಿಗಳನ್ನು ಮರುಪಡೆಯಲು ಮತ್ತು ಭದ್ರತೆಯನ್ನು ಜಾರಿಗೊಳಿಸಲು ಅರ್ಹರಾಗಿದ್ದಾರೆ. **ಓಂಕಾರ ಅಸೆಟ್ಸ್ ರೀಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ನ** ಅಧಿಕೃತ ಅಧಿಕಾರಿ, SARFAESI ACT 2002 ರ ಸೆಕ್ಷನ್ 13 ರ ಉಪವಿಭಾಗ (12) ರ ಅಡಿಯಲ್ಲಿ ಸರಿಯಾಗಿ ನೇಮಕಗೊಂಡಿದ್ದಾರೆ, 2002 ರ ಸೆಕ್ಷನ್ 13 ರ ಉಪವಿಭಾಗ (4) ರ ಅಡಿಯಲ್ಲಿ ಅವರಿಗೆ ನೀಡಲಾದ ಅಧಿಕಾರವನ್ನು ಚಲಾಯಿಸಿ, 2026 **ರ ಮೇ 20 ನೇ ದಿನದಂದು** ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ, ಕೆಳಗೆ ವಿವರಿಸಿದಂತೆ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ.
ಸಾಲಗಾರರು, ವಿಶೇಷವಾಗಿ ಸಾರ್ವಜನಿಕರು ಆಸ್ತಿಯೊಂದಿಗೆ ವ್ಯವಹರಿಸದಂತೆ ಇಲ್ಲಿ ಎಚ್ಚರಿಕೆ ನೀಡಲಾಗಿದೆ ಮತ್ತು ಅಂತಹ ಆಸ್ತಿಯೊಂದಿಗೆ ಯಾವುದೇ ವ್ಯವಹಾರವು **ಓಂಕಾರ PS26/2024-25 ಟ್ರಸ್ಟ್ ಟ್ರಸ್ಟಿಯಾಗಿ** ಕಾರ್ಯನಿರ್ವಹಿಸುವ ಓಂಕಾರ ಅಸೆಟ್ಸ್ ರೀಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ನ ಜವಾಬ್ದಾರಿಗೆ ಒಳಪಟ್ಟಿರುತ್ತದೆ, ಇದು ಕೊಹಿನೂರ್ ಸ್ಕ್ವೇರ್, 47 ನೇ ಮಹಡಿ, N. C. ಕೇಳ್ಕರ್ ಮಾರ್ಗ, R.G. ಗಡ್ಕರಿ ಚೌಕ್, ದಾದರ್ (ಪಶ್ಚಿಮ), ಮುಂಬೈ 400028 ನಲ್ಲಿ ಕಾರ್ಪೊರೇಟ್ ಕಚೇರಿಯನ್ನು ಹೊಂದಿದೆ. 30.06.2025 ರಂತೆ **ರೂ. 9,11,382/- (ಒಂಬತ್ತು ಲಕ್ಷ ರೂಪಾಯಿಗಳು ಹನ್ನೊಂದು ಸಾವಿರದ ಮೂರು ನೂರ ಎಂಬತ್ತೆರಡು ಮಾತ್ರ)** ಜೊತೆಗೆ ಸಂಚಿತ ಬಡ್ಡಿ/ಅನಗತ್ಯ ಬಡ್ಡಿಯನ್ನು ಒಪ್ಪಂದದ ದರ(ಗಳು) ಜೊತೆಗೆ ಪ್ರಾಸಂಗಿಕ ವೆಚ್ಚಗಳು, ವೆಚ್ಚಗಳು, ಶುಲ್ಕಗಳು ಇತ್ಯಾದಿಗಳಲ್ಲಿ ವಿಧಿಸಲಾಗುತ್ತದೆ.
ಸಾಲಗಾರ/ಸಹ-ಸಾಲಗಾರರ/ಖಾತರಿದಾರರು/ಅಡಮಾನದಾರರ ಗಮನವನ್ನು ಕಾಯಿದೆಯ ಸೆಕ್ಷನ್ 13 ರ ಉಪ-ವಿಭಾಗ 8 ರ ನಿಬಂಧನೆಗಳಿಗೆ ಆಹ್ವಾನಿಸಲಾಗಿದೆ, ಸುರಕ್ಷಿತ ಸ್ವತ್ತುಗಳನ್ನು ಪುನಃ ಪಡೆದುಕೊಳ್ಳಲು ಲಭ್ಯವಿರುವ ಸಮಯಕ್ಕೆ ಸಂಬಂಧಿಸಿದಂತೆ. ಮೇಲಿನ ಖಾತೆಯಲ್ಲಿ OARPL ಗೆ ಅಡಮಾನ ಇಡಲಾದ/ನಿಯೋಜಿಸಲಾದ/ವಿಧಿಸಲಾದ/ಅಡಮಾನ ಇಡಲಾದ ಸ್ವತ್ತುಗಳು/ಆಸ್ತಿಗಳ ವಿವರಗಳನ್ನು ಮತ್ತು ಯಾರ ಸ್ವಾಧೀನವನ್ನು ತೆಗೆದುಕೊಳ್ಳಲಾಗಿದೆ ಎಂಬುದನ್ನು ಇಲ್ಲಿ ನೀಡಲಾಗಿದೆ:

ಸ್ಥಿರ ಆಸ್ತಿಯ ವಿವರಣೆ

ಪ್ಲಾಟ್ ಸಂಖ್ಯೆ.250, ಸೈ. ನಂ.106 & 107, KSRTC ಬಸ್ ನಿಲ್ದಾಣದ ಹಿಂದೆ, ಸಿವಿಐ ಕಾಲೋನಿ ಬ್ರಹ್ಮಪುರ, ಎಂಎಸ್ಕೆ ಮಿಲ್ ರಸ್ತೆ, ತಾಲೂಕು ಮತ್ತು ಜಿಲ್ಲೆ. ಕರ್ನಾಟಕ -585103, ಗಡಿಗಳು:- ಪೂರ್ವ-30 ಅಡಿ ಅಗಲದ ರಸ್ತೆ, ಪಶ್ಚಿಮ- ಪ್ಲಾಟ್ ಸಂಖ್ಯೆ. 254, ಉತ್ತರ- ಪ್ಲಾಟ್ ಸಂಖ್ಯೆ. 251, ದಕ್ಷಿಣ- ಪ್ಲಾಟ್ ಸಂಖ್ಯೆ. 249.

(ಅಧಿಕೃತ ಅಧಿಕಾರಿ)
ಓಂಕಾರ ಆಸ್ತಿಗಳ ಪುನರ್ನಿರ್ಮಾಣ ಪ್ರೈ. ಲಿಮಿಟೆಡ್ಗಾಗಿ
(ಓಂಕಾರ PS26/2024-25 ಟ್ರಸ್ಟ್ನ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ)
ದಿನಾಂಕ: 20.05.2026
ಸ್ಥಳ: ಕಲಬುರಗಿ.

Udayakala printed and published by **K.N.Puttalingaiah** on behalf of **Anikethana Publication and Printers** and Printed at M.N.S. PRINTERS PVT LTD. 345/4, Bhattarahalli Near K R Puram, RTO Old Madras Road, Bengaluru- 560049, Manipal Media Network Ltd. Sy No. 7/2, Plat No. Ca-3/1, 28(D) &29 Kapnoor 2nd Stage, Industrial Area, Kapnoor Village Kalaburagi Taluka Kalaburagi, **Editor: K N Puttalingaiah:** (Responsible for all the news printed). All rights reserved. Reproduction in whole or in part without written permission is prohibited.RNI REG NO. 71090/97.
Volume:**07** Issue: **062**